# ಮೃಗರೂಪಿಗಳು

ಸೃಷ್ಟಿಯ ಗುಟ್ಟುಗಳು ಅಪಾರ. ಬಗೆದಷ್ಟೂ ಅವು ಹೊರಬರುತ್ತವೆ. ಹಿಂದೆಂದೂ ನೋಡದೆ ಇರುವ, ಕೇಳದೆ ಇರುವ ಸಂಗತಿಗಳು ಗೋಚರವಾಗುತ್ತವೆ. ಅಚ್ಚರಿ ಹುಟ್ಟಿಸುತ್ತವೆ. ಜೊತೆಗೆ ವಿಷಾದ, ದುಃಖವೂ ಉಂಟಾಗುತ್ತದೆ. ಎಷ್ಟೋ ಸಂಗತಿಗಳು ನಮ್ಮೆದುರೇ ಇದ್ದರೂ ನಾವು ಕಣ್ಣು ತರೆದು ನೋಡಲು ನಿರಾಕರಿಸಿರುತ್ತೇವೆ. ಬೇಕಾದುದ್ದನ್ನು ನೋಡುವ, ಬೇಡದೆ ಇರುವುದನ್ನು ಉದಾಸೀನ ಮಾಡುವ ಪ್ರವೃತ್ತಿ ಮನುಷ್ಯನ ರಕ್ತದಲ್ಲೇ ಬೆರೆತುಹೋಗಿದೆ.

ಹೆಣ್ಣು, ಹೆಣ್ಣು ದೇಹ, ಅವಳ ಉಡುಗೆತೊಡುಗೆ, ದೇಹದ ಅಂಗಾಂಗಗಳನ್ನು ನಮ್ಮ ಸಮಾಜ ಬಹಳ ಕುತೂಹಲಕರವಾದದ್ದು ಎನ್ನುವಂತೆಯೇ ನೋಡಿದೆ. ಎಂತಹ ಅಕರಾಳ ವಿಕರಾಳ ಗಂಡಿಗೂ ಸುರ ಸುಂದರಿಯಾದ ಹೆಂಡತಿಯೇ ಬೇಕು. ಹೆಣ್ಣಿಗಿರುವ ತಾಳ್ಮೆಯೆಂತಹುದೆಂದರೆ ಎಂತಹ ಮೃಗಸ್ವರೂಪಿ ಗಂಡಿನೊಂದಿಗೂ ಅವಳು ಜೀವನ ನಡೆಸಬಲ್ಲಳು. ಮೃಗಸ್ವರೂಪಿ ಎಂದ ತಕ್ಷಣ ನನಗೆ ನೆನಪಾಗುವುದು ನನ್ನ ತಾಯಿ ಹೇಳಿದ ಕಥೆ.

ಕತೆಗಳೆಲ್ಲವೂ ಆರಂಭವಾಗುವುದು ಒಂದಾನೊಂದು ಕಾಲದಲ್ಲಿ, ಒಂದಾನೊಂದು ಊರಿನಲ್ಲಿ ಎಂದೇ ಆಗಿರುತ್ತವೆ. ಆ ಕಾಲವನ್ನಾಗಲೀ ಊರನ್ನಾಗಲೀ ಕಂಡವರಿಲ್ಲ, ಕೇಳಿದವರಿಲ್ಲ. ಒಂದು ರೈತಾಪಿ ಕುಟುಂಬಕ್ಕೆ ಸೇರಿದ ಹುಡುಗಿಯೊಬ್ಬಳು ಇತರ ಹುಡುಗರೊಂದಿಗೆ ದನ ಕಾಯಿಸುತ್ತಾ, ಇಷ್ಟಬಂದ ಮರಗಳನ್ನು ಹತ್ತುತ್ತಾ ಇಳಿಯುತ್ತಾ ಬಾಲ್ಯವನ್ನು ಕಳೆಯುತ್ತಿರುವಾಗ ಒಂದು ದಿನ ಅದೆಲ್ಲವನ್ನೂ ಕಳೆದುಕೊಳ್ಳುವ ಸಮಯ ಬರುತ್ತದೆ. ಎಂದಿನಂತೆ ಒಂದು ದಿನ ಕಾಡಿಗೆ ಹೋದಾಗ ಒಂದು ಕರಡಿ ಧುತ್ತೆಂದು ಅವಳ ಎದುರಿಗೆ ಪ್ರತ್ಯಕ್ಷವಾಗುತ್ತದೆ. ಅವಳ ಒಡನಾಡಿಗಳು ಹೆದರಿ ದಿಕ್ಕಾಪಾಲಾಗಿ ಕಾಡಿನಲ್ಲಿ ಚದುರಿ ಹೋಗುತ್ತಾರೆ. ಕರಡಿ ಅವಳನ್ನು ತನ್ನ ಗುಹೆಗೆ ಎತ್ತಿಕೊಂಡು ಹೋಗುತ್ತದೆ. ಅಲ್ಲಿಂದ ಮುಂದೆ ಅವಳೆಂದೂ ಹೊರ ಜಗತ್ತಿಗೆ ಬರಲೇ ಇಲ್ಲ. ಕರಡಿಪಾಲಾದ ಆ ಹುಡುಗಿಯನ್ನು ಜನ ಕ್ರಮೇಣ ಮರೆತೇಬಿಡುತ್ತಾರೆ.

ಆ ಕರಡಿ ಅವಳನ್ನು ಕೊಂದಿತೇ? ಇಲ್ಲ, ಅವಳನ್ನು ಕೊಲ್ಲುವ ಬದಲು ತನ್ನ ಸಂಗಾತಿಯನ್ನಾಗಿಸಿಕೊಂಡಿತು. ಅವಳೊಂದಿಗೆ ದಾಂಪತ್ಯ ನಡೆಸಿತು. ಪೂರ್ವದ ನಮ್ಮ ಜನಪದ ಕತೆಗಳಲ್ಲಿ ಕಲ್ಲು, ಗಿಡ, ಮರ, ಪ್ರಾಣಿಪಕ್ಷಿಗಳೆಲ್ಲಾ ಮಾತನಾಡುವುದರಿಂದ ಪ್ರಾಣಿಯೊಂದಿಗೆ ಮನುಷ್ಯಳೊಬ್ಬಳು ಹೇಗೆ ದಾಂಪತ್ಯ ನಡೆಸಬಹುದು ಎಂಬ ಪ್ರಶ್ನೆ ಅಪ್ರಸ್ತುತವಾಗಬಹುದು. ಮುಂದೆ ಕರಡಿಯಿಂದ ಅವಳಿಗೆ ಮಕ್ಕಳು ಜನಿಸುತ್ತಾರೆ. ಆದರೆ ಅವಳಿಗೆ ಅಲ್ಲಿಂದ ಬಿಡಿಸಿಕೊಳ್ಳುವ ವಿಚಾರ ಬಿಟ್ಟು ಬೇರೇನೂ ಸಾಧ್ಯವಾಗುತ್ತಿಲ್ಲ. ಜನ ಅವಳನ್ನು ಮರೆತರೂ ಅವಳು ಜನರನ್ನು ಮರೆತಿಲ್ಲ, ತನ್ನ ಹಳ್ಳಿಯನ್ನು ಮರೆತಿಲ್ಲ. ಪ್ರತಿನಿತ್ಯ ಕರಡಿ ತಾನು ಗವಿಯಿಂದ ಹೊರಗೆ ಹೋಗುವಾಗ, ಬರುವಾಗ ದೊಡ್ಡ ಬಂಡೆಯನ್ನು ಅಡ್ಡವಿಟ್ಟು ಹೋಗುವುದರಿಂದ ಅವಳಿಗೆ ಹೊರ ಜಗತ್ತೆಂಬುದು ಕನಸಾಗಿಯೇ ಉಳಿಯಿತು. ತನ್ನ ಸಂತಾನದ ಮೇಲಿನ ಮೋಹ ಕ್ರಮೇಣ ಹೊರಜಗತ್ತಿನ ಆಸೆಯನ್ನು ಮರೆಯಿಸಿತು.

ಇದೇ ರೀತಿಯ ಇನ್ನೊಂದು ಕತೆ ಎ.ಕೆ. ರಾಮಾನುಜನ್ ಸಂಗ್ರಹಿಸಿದ ಜನಪದ ಕತೆಗಳಲ್ಲಿ ಬರುತ್ತದೆ. ಅದನ್ನು ಬಳಸಿಕೊಂಡ ಕನ್ನಡದ ಪ್ರಸಿದ್ಧ ನಾಟಕಕಾರರಾದ ಗಿರೀಶ ಕಾರ್ನಾಡ್ 'ನಾಗಮಂಡಲ'ವನ್ನು ಬರೆದರು. ನಾಗಮಂಡಲದಲ್ಲಿ ರಾತ್ರಿಯಲ್ಲಿ ಮನುಷ್ಯನಾಗುವ, ಹಗಲಲ್ಲಿ ನಾಗನಾಗುವ ಇಬ್ಬಂದಿ ವ್ಯಕ್ತಿತ್ವವೊಂದರ ಕತೆಯಿದೆ. ಇದನ್ನು **split personality** ಎನ್ನುವಂತೆಯೂ ನೋಡಲಾಗಿದೆ. ಸುಂದರಿಯಾದ ಹೆಣ್ಣೊಬ್ಬಳನ್ನು ಮದುವೆಯಾಗಿ ಮನೆಗೆ ಕರೆತಂದ ಗಂಡ ಅಪ್ಪಣ್ಣ ಅವಳನ್ನು ಅದೇ ದಿನ ಮನೆಯಲ್ಲಿ ಕೂಡಿಹಾಕಿ ತಾನು ಇಟ್ಟುಕೊಂಡ ಹೆಣ್ಣೊಬ್ಬಳನ್ನು ಕೂಡಲು ಹೋಗುತ್ತಾನೆ. ತಬ್ಬಿಬ್ಬಾದ ಆ ಹೆಣ್ಣು ತನ್ನ ವಿಧಿಯನ್ನು ಹಳಿಯುತ್ತಾ ಬಂಧನಕ್ಕೆ ಸೇರಿ ಹೋಗುತ್ತಾಳೆ.

ಮುಂದೆ ಅಪ್ಪಣ್ಣನ ತಾಯಿಯ ಸ್ನೇಹಿತೆ ಕುರುಡಜ್ಜಿ ಅವಳ ಬವಣೆಯನ್ನು ಹೋಗಲಾಡಿಸಲು ಬಳಸಿದ ನಾರುಬೇರಿನ ತಂತ್ರ ಕಥೆಯ ದಿಕ್ಕನ್ನೇ ಬದಲಿಸಿ ಬಿಡುತ್ತದೆ. ಆ ನಾರಿನ ಪ್ರಯೋಗ ಗಂಡನ ಮೇಲಾಗದೆ ಹುತ್ತದ ಒಳಗಿನ ಸರ್ಪದ ಮೇಲಾಗಿ ಅವಳ ಜೀವನವೇ ಬದಲಾಗಿ ಬಿಡುತ್ತದೆ. ಗಂಡನನ್ನು ವಶಮಾಡಿಕೊಳ್ಳಲೆಂದು ಹೋದವಳು ಸರ್ಪವನ್ನು ವಶಮಾಡಿಕೊಳ್ಳುತ್ತಾಳೆ. ಹಗಲಿನಲ್ಲಿ ನಿರ್ಲಕ್ಷ್ಯ ತೋರುವ ಗಂಡ, ಇರುಳಲ್ಲಿ ಪ್ರೀತಿಯ ಹೊಳೆ ಹರಿಸುವ ಗಂಡ. ಗೊಂದಲದಲ್ಲೇ ಹೆಣ್ಣು ದಾಂಪತ್ಯ ನಡೆಸುತ್ತಾಳೆ.

ಮುಂದೆ ಅವಳು ಗರ್ಭ ಧರಿಸಿದಾಗ ನಿರ್ಣಾಯಕ ಗಳಿಗೆಗಳು ಎದುರಾಗುತ್ತದೆ. ಹಗಲಿನ ಗಂಡ ಗರ್ಭ ತನ್ನದಲ್ಲವೆಂದು ನಿರಾಕರಿಸಿದರೆ, ಇರುಳಿನ ನಾಗರೂಪಿ ಗಂಡ ಗರ್ಭವನ್ನು ಉಳಿಸಿಕೊಂಡು, ಪಾತಿವ್ರತ್ಯವನ್ನು ಸಾಬೀತು ಮಾಡಲು ನಾಗದಿವ್ಯ ಮಾಡುವಂತೆ ಹೇಳುತ್ತಾನೆ. ಹೆದರಿದರೂ ನಾಗದಿವ್ಯವನ್ನು ಮಾಡಿ ಗೆದ್ದು ದೇವತೆಯೆಂಬ ಗೌರವಕ್ಕೆ ಪಾತ್ರಳಾಗುತ್ತಾಳೆ. ಪರ ಕೊಲ್ಲಲ್ ಹರ ಕಾಯ್ದ ಕತೆಯಿದು.

ಇದೇ ಕತೆಯನ್ನು ತೆಗೆದುಕೊಂಡು ಚಂದ್ರಶೇಖರ ಕಂಬಾರರು 'ಸಿರಿಸಂಪಿಗೆ' ನಾಟಕ ಬರೆದರು. ಇಲ್ಲಿಯ ಕಥಾನಾಯಕ ರಾಜಕುಮಾರನಾಗಿದ್ದು, ತನ್ನ ಸೌಂದರ್ಯಕ್ಕೆ ತಾನೇ ಮರುಳಾದವನು. ಹೀಗಾಗಿ ಯಾವ ಹೆಣ್ಣನ್ನು ಪ್ರೀತಿಸಲೂ ಅವನಿಗೆ ಸಾಧ್ಯವಾಗುವುದಿಲ್ಲ. ತಾನು ಪೂರ್ಣಾಂಗನಲ್ಲ, ತನ್ನ ಉಳಿದ ಅರ್ಧ ಶರೀರವೆಲ್ಲಿ ಎಂಬ ವೈಯಕ್ತಿಕ ಸಮಸ್ಯೆಗೆ ಪರಿಹಾರ ಹುಡುಕಲೆಂದು ಹೊರಟ ಅವನಿಗೆ ಮುಕ್ತಿ ಎಂಬುದಿಲ್ಲ.

ಹೀಗೆ ಜನಪದ ಕತೆಗಳಲ್ಲಿ ಮನುಷ್ಯ ಹಾಗೂ ಪ್ರಾಣಿ ಸಂಬಂಧಿತವಾದ ಹಲವು ಕತೆಗಳು ಸಿಗುತ್ತವೆ. ಅವುಗಳ ಸಾಧ್ಯಾಸಾಧ್ಯತೆಯ ಪ್ರಮಾಣ ಎಷ್ಟೇ ಇದ್ದರೂ ಅಪ್ರಜ್ಞಾಪೂರ್ವಕವಾದ, ವಾಸ್ತವ ಜಗತ್ತಿನಲ್ಲಿ ಈಡೇರಲಾರದ ಅಭೀಪ್ಸೆಗಳನ್ನು ಈಡೇರಿಸಿಕೊಳ್ಳುವ ಪ್ರಯತ್ನಗಳಾಗಿ ಕಂಡುಬರುತ್ತವೆ. ಮನುಷ್ಯ ರೂಪದಲ್ಲಿ ಈಡೇರಲಾರದ್ದು ಪ್ರಾಣಿ ರೂಪದಲ್ಲಾದರೂ ಸೈ ಎನ್ನುವಂತೆ. ದೇವಲೋಕದ ದೇವತೆಗಳಲ್ಲಿ ಕೆಲವರು ಪ್ರಾಣಿದೇಹ, ನರನ ಶಿರ ಧರಿಸಿದರೆ, ಮತ್ತೆ ಕೆಲವರು ನರನ ದೇಹ, ಪ್ರಾಣಿಯ ಶಿರ ಧರಿಸುತ್ತಾರೆ. ಏನೇ ಮಾಡಿದರೂ ಮಾನವನ ಪೂರ್ಣತ್ವದ ಕನಸು ಕನಸಾಗಿಯೇ ಉಳಿಯುತ್ತದೆ. ಹೀಗಾಗಿಯೇ ಮನುಷ್ಯ ಪೂರ್ಣವಾಗುವುದು ಎಂದರೆ ತನ್ನಲ್ಲಿನ ಮೃಗೀಯ ಗುಣಗಳನ್ನು ಇಲ್ಲವಾಗಿಸಿಕೊಳ್ಳುವುದಾಗಿದೆ. ಪೂರ್ಣ ನರನಾಗುವುದೆಂದರೆ ತನ್ನಲ್ಲಿನ ಒಡಕುಗಳನ್ನು ನೀಗಿಕೊಳ್ಳುವುದಾಗಿದೆ.

■ **ಅಮೃತಮತಿ**

## ಮಾತೇ ಮುತ್ತು

- ಉಪದೇಶ ಮಾಡುವವನ ದೋಷ ತಕ್ಷಣ ನಮ್ಮನ್ನು ಆಕರ್ಷಿಸುತ್ತದೆ.
  —ಲೂಥರ್
- ಕೆಲಸವಿಲ್ಲದೆ ಕ್ಷಣ ಕಳೆದರೂ ಅದು ಕಳ್ಳತನ ಮಾಡಿದಂತೆ.
  —ಗಾಂಧೀಜಿ
- ರಾಜಕೀಯದಲ್ಲಿ ಮೂರ್ಖತನ ಎನ್ನುವುದು ಅಂಗವೈಕಲ್ಯವಲ್ಲ.
  —ನೆಪೋಲಿಯನ್ ಬೋನೊಪಾರ್ಟೆ
- ನೀನು ಬೇರೆಯವರ ಯೋಗ್ಯತೆ ಅಳೆಯುತ್ತಿರುವೆಯಾದರೆ ನಿನಗೆ ಪ್ರೀತಿಸಲು ಸಮಯವೇ ಇರುವುದಿಲ್ಲ.
  —ಮದರ್ ತೆರೇಸಾ
- ರಾಜಕೀಯವೆಂದರೆ ರಕ್ತರಹಿತ ಯುದ್ಧ; ಯುದ್ಧ ಎಂದರೆ ರಕ್ತಸಹಿತ ರಾಜಕೀಯ.
  —ಮಾವೋ ತ್ಸೆ ತುಂಗ್
- ಸಾಮಾಜಿಕ ಜವಾಬ್ದಾರಿ, ದೇಶದ ಬಗ್ಗೆಯ ಕಳಕಳಿ ಬೇರೆಯವರಿಂದ ಅಪೇಕ್ಷಿಸುವಂಥದ್ದೇ ಅಲ್ಲ. ನಮ್ಮಲ್ಲೇ ಇರಬೇಕಾದುದು.
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ನೀವು ಮಾಡಿದ ತಪ್ಪಿನ ಅರಿವಾದಾಗ ತಿದ್ದಿಕೊಳ್ಳಲು ಕೂಡಲೇ ಯತ್ನಿಸಿ.
  —ದಲೈ ಲಾಮಾ
- ಸತ್ಯವನ್ನು ಎಲ್ಲಾ ಕಡೆಯಿಂದಲೂ ಪರಾಮರ್ಶಿಸಿ ನೋಡು.
  —ರಾಮಕೃಷ್ಣ ಪರಮಹಂಸ